ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : **1527**

ಸದಸ್ಯರ ಹೆಸರು : **ಡಾ|| ತಳವಾರ್ ಸಾಬಣ್ಣ**
(ನಾಮ ನಿರ್ದೇಶನ ಹೊಂದಿದ ವಿಧಾನ ಪರಿಷತ್ತಿನ ಸದಸ್ಯರು)

ಉತ್ತರಿಸುವ ದಿನಾಂಕ : **18-03-2021**

ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಎ)	ಜಲ ಸಂಪನ್ಮೂಲ ಇಲಾಖೆಯಿಂದ 182 ಸಹಾಯಕ ಇಂಜಿನಿಯರ್ ಗಳನ್ನು ಸಹಾಯಕ ಕಾರ್ಯಪಾಲಕ ಇಂಜಿನೀಯರ್ (ವಿಭಾಗ-1) (ಮೆಕಾನಿಕಲ್ ಮತ್ತು ಸಿವಿಲ್) ವೃಂದಕ್ಕೆ ಪದನ್ನೋತಿ ನೀಡಲಾಗಿದೆಯೇ;	ಪದೋನ್ನತಿ ನೀಡಿಲ್ಲ. ಆದರೆ, ಜಲಸಂಪನ್ಮೂಲ ಇಲಾಖೆಯಲ್ಲಿ ಬಹಳಷ್ಟು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಗಳ ಹುದ್ದೆಯು ಖಾಲಿ ಇದ್ದುದರಿಂದ ಹಾಗೂ ನೀರಾವರಿ ಯೋಜನೆಗಳ ಕಾಮಗಾರಿಗಳನ್ನು ತ್ವರಿತವಾಗಿ ಹಾಗೂ ಆದ್ಯತೆಯ ಮೇಲೆ ಕೈಗೊಳ್ಳಬೇಕಾಗಿದ್ದುದರಿಂದ ಅಧಿಸೂಚನೆ ಸಂಖ್ಯೆ ಜಸಂಇ 48 ಸೇಸಇ 2020 ದಿನಾಂಕ 04/06/2020ರಲ್ಲಿ ಒಟ್ಟು 182 ಸಹಾಯಕ ಇಂಜಿನಿಯರ್ (ಸಿವಿಲ್) ಹಾಗೂ (ಮೆಕ್ಯಾನಿಕಲ್) ವೃಂದದಿಂದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹುದ್ದೆಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 32ರಡಿ ಸ್ವತಂತ್ರ ಪ್ರಭಾರದಲ್ಲಿರಿಸಲಾಗಿದೆ.
ಬಿ)	ನೀಡಿದ್ದಲ್ಲಿ, ಕಲ್ಯಾಣ ಕರ್ನಾಟಕ (ಹಿಂದಿನ ಹೈದರಾಬಾದ್ ಕರ್ನಾಟಕ ಕಲಂ 371ಜೆ ಮೀಸಲಾತಿ ಅಡಿಯಲ್ಲಿ ಜಿಲ್ಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸಹಾಯಕ ಇಂಜಿನೀಯರ್ ಗಳನ್ನು ಪರಿಗಣಿಸಿಲ್ಲದಿರುವುದರಿಂದ ಕಲ್ಯಾಣ ಕರ್ನಾಟಕ ಭಾಗದಲ್ಲಿ ಸೇವೆ ಸಲ್ಲಿಸುತ್ತಿರುವ ಇಂಜಿನಿಯರ್ ಗಳಿಗೆ ಅನ್ಯಾಯವಾಗುವುದಿಲ್ಲವೆ; ಈ ಅನ್ಯಾಯವನ್ನು ಸರಿಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?	ಕಲ್ಯಾಣ ಕರ್ನಾಟಕ (ಹೈದರಾಬಾದ್ ಕರ್ನಾಟಕ) ಪ್ರದೇಶಕ್ಕೆ ಭಾರತ ಸಂವಿಧಾನದ ಅನುಚ್ಛೇದ 371ಜೆ ರಡಿಯಲ್ಲಿ ಜಲಸಂಪನ್ಮೂಲ ಇಲಾಖೆಯ ಅಧಿಸೂಚನೆ ಸಂಖ್ಯೆ ಜಸಂಇ 167 ಸೇಅವಿ 2013, ದಿನಾಂಕ: 30/06/2016 ರಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರ ವೃಂದಕ್ಕೆ ಈ ಕೆಳಕಂಡಂತೆ 87 ಹುದ್ದೆಗಳ ಮೀಸಲಾತಿಯನ್ನು ನಿಗಧಿಪಡಿಸಿ ಆದೇಶಿಸಿದೆ : ಎ) ರಾಜ್ಯ ಮಟ್ಟದ ಸ್ಥಳೀಯ ವೃಂದ 3 ಹುದ್ದೆಗಳು ಬಿ) ಪ್ರಾದೇಶಿಕ ಸ್ಥಳೀಯ ವೃಂದ 84 ಹುದ್ದೆಗಳು **ಒಟ್ಟು 87 ಹುದ್ದೆಗಳು**

ಮೇಲ್ಕಂಡ ಮೀಸಲಾತಿಯನ್ವಯ ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಮೀಸಲಾಗಿರಿಸಿರುವ 87 ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹುದ್ದೆಗಳ ಪೈಕಿ ಈಗಾಗಲೇ 44 ಹುದ್ದೆಗಳನ್ನು ಪರಿಗಣಿಸಲಾಗಿದ್ದು ವಿವರಗಳು ಈ ಕೆಳಕಂಡಂತಿದೆ :

ಎ)	ಅಧಿಸೂಚನೆ ಸಂಖ್ಯೆ: ಜಸಂಇ 48 ಸೇಸಎ 2020 ದಿನಾಂಕ: 04/06/2020ರಲ್ಲಿ ಸ್ವತಂತ್ರ ಪ್ರಭಾರದಲ್ಲಿರಿಸಿರುವ ಸಹಾಯಕ ಇಂಜಿನಿಯರ್ ಗಳ ಸಂಖ್ಯೆ	10
ಬಿ)	ದಿನಾಂಕ 4-6-2020 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿಯು ನಿಯಮ 32 ರಲ್ಲಿರಿಸಲು ಶಿಫಾರಸ್ಸು ಮಾಡಿರುವ ಸಹಾಯಕ ಇಂಜಿನಿಯರ್ ಗಳ ಸಂಖ್ಯೆ	4
ಸಿ)	ದಿನಾಂಕ: 15.02.2021ರ ಮತ್ತು 09.03.2021ರ ಪದೋನ್ನತಿ ಸಮಿತಿಯ ತೀರ್ಮಾನದಂತೆ ಸ್ವತಂತ್ರ ಪ್ರಭಾರದಲ್ಲಿರಿಸಲು ಶಿಫಾರಸ್ಸು ಮಾಡಿರುವ ಸಹಾಯಕ ಇಂಜಿನಿಯರ್ ಗಳ ಸಂಖ್ಯೆ	30
	ಒಟ್ಟು	**44**

ಹೈದ್ರಾಬಾದ್-ಕರ್ನಾಟಕ ರಾಜ್ಯ ಮಟ್ಟದ ಸ್ಥಳೀಯ ವೃಂದ ಮತ್ತು ಪ್ರಾದೇಶಿಕ ಸ್ಥಳೀಯ ವೃಂದದ ಸಹಾಯಕ ಇಂಜಿನಿಯರ್ (ಸಿವಿಲ್ / ಮೆಕ್ಯಾನಿಕಲ್) ವೃಂದದ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ ಜಸಂಇ 104 ಸೇಸಕಿ 2016, ದಿನಾಂಕ 7-10-2020 ರಲ್ಲಿ ಪ್ರಕಟಿಸಲಾಗಿತ್ತು. ಈ ಅಧಿಸೂಚನೆಗೆ ಹಲವಾರು ಆಕ್ಷೇಪಣೆಗಳು ಸ್ವೀಕೃತವಾಗಿದ್ದವು. ಅಲ್ಲದೇ, ಇತ್ತೀಚೆಗೆ ಹರಪನಹಳ್ಳಿ ತಾಲ್ಲೂಕನ್ನು ಬಳ್ಳಾರಿ ಜಿಲ್ಲೆಗೆ ಸೇರ್ಪಡೆಗೊಳಿಸಿದ್ದರಿಂದ ಆ ವಿಭಾಗಕ್ಕೆ ಸೇರಿದ ಕೆಲವು ಇಂಜಿನಿಯರ್ ಗಳು ತಮ್ಮನ್ನೂ ಸಹ ಕಲ್ಯಾಣ ಕರ್ನಾಟಕ ಮೀಸಲಾತಿಯಡಿ ಪರಿಗಣಿಸುವಂತೆ ಕೋರಿರುತ್ತಾರೆ.

ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಗೆ ಸ್ವೀಕೃತವಾದ ಎಲ್ಲಾ ಆಕ್ಷೇಪಣೆಗಳನ್ನು ಪರಿಶೀಲಿಸಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಕಲ್ಯಾಣ ಕರ್ನಾಟಕ) ವಿಭಾಗಕ್ಕೆ ಅಭಿಪ್ರಾಯ / ಸ್ಪಷ್ಟೀಕರಣ ಕೋರಿ ಕಡತವನ್ನು ಕಳುಹಿಸಲಾಗಿದೆ. ಆ ವಿಭಾಗದಿಂದ ಅಭಿಪ್ರಾಯ ಸ್ವೀಕೃತವಾದ ನಂತರ ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಪ್ರಕಟಿಸಿ ಅದರ ಆಧಾರದ ಮೇಲೆ ಈ ಉದ್ದೇಶಕ್ಕಾಗಿ ಈಗಾಗಲೇ ಮೀಸಲಿರಿಸಿರುವ 43 ಹುದ್ದೆಗಳಿಗೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ವೃಂದಕ್ಕೆ ನಿಯಮ 32 ರಡಿ ಸ್ವತಂತ್ರ ಪ್ರಭಾರದಲ್ಲಿರಿಸಲು ಕ್ರಮ ವಹಿಸಲಾಗುವುದು.

ಸಂಖ್ಯೆ : ಜಸಂಇ 04 ಸೇಸಎ 2021.

(ಬಿ. ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ